# ದೇವರೆ, ಅವಳು ಕಪ್ಪಗಿದ್ದಾಳೆ


ಅನಿಲಗಳು ಮತ್ತು ದ್ರವ ಪದಾರ್ಥಗಳು
ಅವಳ ಸ್ವಭಾವ
ಅವಳ ಕಿಬ್ಬೊಟ್ಟೆಯ ಮಧ್ಯದಿಂದ
ಚೆಲ್ಲಿದ ಮೊಟ್ಟೆಗಳೆ ಅಸಂಖ್ಯಾತ ನಕ್ಷತ್ರಗಳು
ಘನ ಮತ್ತು ದ್ರಾವಣಗಳು
ಅವಳ ರೀತಿ ರಿವಾಜುಗಳು
ಅವಳ ಜೈವಿಕ ಮೊಣಕಾಲುಗಳ ಮೇಲೆ
ಜೋಕಾಲಿಯಾಡುವ ಚಿಣ್ಣರಂತೆ
ಗ್ರಹತಾರೆಗಳು ಸೌರ ಮಂಡಲದಲ್ಲಿ ನೆಲೆಗೊಂಡಿವೆ

ಗಣಿತ ಮತ್ತು ರಾಸಾಯನಿಕ ಸೂತ್ರಗಳು
ಅವಳ ನಿಯಮಗಳು ತನ್ನ ಖಾಲಿ ಕೈಗಳನ್ನು
ಬೀಸಿ ಕೆನ್ನೆಗೆ ಬಾರಿಸುವಳು ವಿಕಾಸವನು ಶಿಕ್ಷಿಸಲು
ತುಂಟ ಹುಡುಗರನ್ನು ದಂಡಿಸುವಂತೆ ತಾಯಿ

ಲೋಹಗಳು, ಮಿಶ್ರಣಗಳು
ಅವಳ ದೈನಿಕ ಕೆಲಸಗಳು
ತಾರುಣ್ಯದಂತೆ ತಲೆ ಎತ್ತುವ
ಅವಳ ದೂರದರ್ಶಕದಿಂದ
ಸುತ್ತಲೂ ಗಮನಿಸುತ್ತವೆ
ದಶದಿಕ್ಕುಗಳಂತಹ ಅವಳ ಕಣ್ಣುಗಳು

ಅವಳ ಬಳಿ ಇರುವ ಧ್ವನಿ ಮತ್ತು ಬೆಳಕಿನ
ವೇಗೋತ್ಕರ್ಷದಿಂದ
ಅವಳ ಎಲ್ಲ ಮಕ್ಕಳೂ
ತೊರೆಯುವರು ಮನೆಯನ್ನು

ಅಣು ಮತ್ತು ವ್ಯೋಮಗಳು
ಸೃಷ್ಟಿಸುವ ಯುದ್ಧ ರಾಕೆಟ್‌ಗಳು ಮೃತ ವ್ಯಕ್ತಿಗಳಂತೆ
ಎಂದಾದರೂ ಅವಳನ್ನು ಪುನಃ ತಲುಪಬಹುದೇ?




● ಇಂಗ್ಲಿಷ್ ಮೂಲ: ಗ್ರೆಗೊರಿ ಕೊರೊಸೊ
ಕನ್ನಡಕ್ಕೆ: ಸಿದ್ಧಲಿಂಗಸ್ವಾಮಿ ವಸ್ತ್ರದ